# ನೀಲಾಂಜನೆಯ ನೃತ್ಯ

ನೀಲಾಂಜನೆಯ ನೃತ್ಯ ಪ್ರಸಂಗ ಪಂಪಕವಿಯ ಆದಿಪುರಾಣ ಮಹಾಕಾವ್ಯದ ಭಾವ ಶಿಖರಗಳಲ್ಲಿ ಒಂದು. ಜೈನರ ಪ್ರಥಮ ತೀರ್ಥಂಕರನೆನ್ನಿಸಿಕೊಂಡ ಪುರುದೇವ ಲೌಕಿಕ ಬದುಕನ್ನು ಕೊಡವಿ ಬಿಸುಟು, ಅಲೌಕಿಕದತ್ತ ಮುಖ ಮಾಡುವುದಕ್ಕೆ ಪ್ರೇರಕವಾದ ಪ್ರಸಂಗವಿದು, ಪುರುದೇವ ಸಾಮಾನ್ಯ ಮನುಷ್ಯನಂತೆ ಪ್ರಾಪಂಚಿಕ ಜೀವನದಲ್ಲಿ ತೊಡಗಿಕೊಂಡಿದ್ದಾತ. ವಿವಾಹಿತನಾಗಿ ಸಾಂಸಾರಿಕ ಸುಖವನ್ನು ಅನುಭವಿಸುತ್ತಿದ್ದವನು. ಒಮ್ಮೆ ಆತ ಸ್ವಯಂ ಇಂದ್ರನೇ ತನಗಾಗಿ ಏರ್ಪಡಿಸಿದ್ದ ನೃತ್ಯ ಸಭೆಯಲ್ಲಿ ಲೋಕೋತ್ತರ ಸುಂದರಿಯಾಗಿದ್ದ ನೀಲಾಂಜನೆಯೆಂಬ ಅಪ್ಸರೆಯ ನೃತ್ಯವನ್ನು ಸವಿಯುತ್ತಾ ಕುಳಿತಿದ್ದ. ಉಳಿದ ಸಭಿಕರು ಆಕೆಯ ನೃತ್ಯ ವೈಭವದಲ್ಲಿ ತಮ್ಮನ್ನೇ ತಾವು ಮರೆತಿದ್ದರು. ಆದರೆ ನರ್ತಿಸುತ್ತಿರುವಾಗಲೇ ನೀಲಾಂಜನೆಯ ಆಯುಷ್ಯ ಮುಗಿದು, ವೇದಿಕೆಯ ಮೇಲೆಯೇ ಆಕೆ ಹಠಾತ್ತನೆ ಕರ್ಪೂರದಂತೆ ಕರಗಿ ಕಾಣೆಯಾದಳು. ಆದರೆ ದೇವೇಂದ್ರ ಸಭೀಕರಿಗೆ ರಸಭಂಗವಾಗಬಾರದೆಂದು ತಕ್ಷಣವೇ ನೀಲಾಂಜನೆಯಂಥ ಮತ್ತೊಬ್ಬ ನರ್ತಕಿಯನ್ನು ಸೃಷ್ಟಿಸಿ, ನೃತ್ಯ ಮುಂದುವರೆಯುವಂತೆ ನೋಡಿಕೊಂಡ. ಪುರುದೇವನೊಬ್ಬನ ವಿನಾ ಉಳಿದವರಿಗೆ ಯಾರಿಗೂ ಇಂಥದೊಂದು ಘಟನೆ ನಡೆಯಿತೆಂದು ತಿಳಿಯಲೇ ಇಲ್ಲ. ನೀಲಾಂಜನೆಯ ಸಾವು ಪುರುದೇವನಲ್ಲಿ ಬದುಕಿನ ಕ್ಷಣಿಕತೆಯ ಬಗೆಗೆ ಚಿಂತನೆಯನ್ನು ಹುಟ್ಟುಹಾಕಿ, ತೀವ್ರ ವೈರಾಗ್ಯವನ್ನುಂಟು ಮಾಡಿತು. ಆತ ಲೌಕಿಕ ಜೀವನವನ್ನು ತ್ಯಜಿಸಿ, ತಪಸ್ಸಿಗಾಗಿ ತೆರಳಿದ.

ಮನುಷ್ಯರನ್ನು ಇದ್ದಕ್ಕಿದ್ದಂತೆ, ಯಾವ ಪೂರ್ವಸಿದ್ಧತೆ, ಸೂಚನೆಗಳಿಲ್ಲದೆ ಬದಲಾಯಿಸುವಂಥ ಇಂಥ ಅಸಾಧಾರಣ ಪ್ರಸಂಗಗಳು ವಿರಳವಾದರೂ ಅಸಹಜವೇನಲ್ಲ. ರಾಗದಿಂದ ವಿರಾಗದ ಕಡೆಗೆ, ಅನುರಕ್ತಿಯಿಂದ ವಿರಕ್ತಿಯ ಕಡೆಗೆ ಹೊರಳಿಕೊಳ್ಳುವಂತೆ ಮಾಡುವ ಈ ಬಗೆಯ ಘಟನೆಗಳು ಅಸಾಧಾರಣ ವ್ಯಕ್ತಿಗಳ ಬದುಕಿನಲ್ಲಿ ಕಾಣಿಸಿಕೊಳ್ಳುವುದನ್ನು ನಾವು ಗಮನಿಸಬಹುದು. ತೀವ್ರ ಭೋಗಾಪೇಕ್ಷೆಯ ಸ್ಥಿತಿ ಭೋಗ ನಿರಸನ ಸ್ಥಿತಿಯಾಗಿ ಮಾರ್ಪಡುವ ದಿವ್ಯಕ್ಷಣಗಳು ಅಂಥವು. ರಾಜಕುಮಾರ ಸಿದ್ಧಾರ್ಥ ತುಂಬು ಯೌವ್ವನದಲ್ಲಿದ್ದಾಗಲೇ ಮಡದಿ, ಮಗು, ಅರಮನೆ, ರಾಜವೈಭವ ಎಲ್ಲವನ್ನೂ ತ್ಯಜಿಸಿ, ಬದುಕಿನ ನಿಜವಾದ ಅರ್ಥವನ್ನು ಹುಡುಕಿಕೊಂಡು, ರಾತ್ರೋರಾತ್ರಿ ಅರಮನೆಯಿಂದ ಹೊರಡಲು ಒತ್ತಾಯಿಸಿದುದು ಆತನಿಗೆ ಆಕಸ್ಮಿಕವಾಗಿ ಎದುರಾದ ಕಠೋರ ವಾಸ್ತವ ಎಂಬುದು ಎಲ್ಲರಿಗೂ ತಿಳಿದುದೇ. ಪತ್ನಿಯನ್ನು ಕ್ಷಣಕಾಲವೂ ಬಿಟ್ಟಿರಲಾಗದಷ್ಟು ವ್ಯಾಮೋಹಿಯಾಗಿದ್ದ ವ್ಯಕ್ತಿಯೊಬ್ಬ ನಿರ್ಮೋಹಿಯಾಗಿ 'ತುಳಸೀದಾಸ'ನೆನ್ನಿಸಿಕೊಳ್ಳಲು ಕಾರಣವಾದುದೂ ಇಂಥದೇ ಒಂದು ಆಕಸ್ಮಿಕದಿಂದ. 'ನವಕೋಟಿ ನಾರಾಯಣ' ಎಂದು ಹೆಸರಾಗಿದ್ದ ಜಿಪುಣ ಶ್ರೀಮಂತನೊಬ್ಬ, ಎಲ್ಲವನ್ನೂ ಬಿಟ್ಟು, ಪ್ರಪತ್ತಿ ಧರ್ಮವನ್ನು ಸ್ವೀಕರಿಸಿ, 'ಪುರಂದರ ದಾಸ'ರಾಗಿದ್ದು 'ಮೂಗುತಿಯ ಪ್ರಸಂಗ'ವೆಂಬ ಅನಿರೀಕ್ಷಿತ ಘಟನೆಯಿಂದ. ವೆಂಕಟರಮಣನೆಂಬ ತರುಣ ಇದ್ದಕ್ಕಿದ್ದಂತೆ ಸಾವಿನ ಅನುಭವವನ್ನು ಆವಾಹಿಸಿಕೊಂಡು, ಅದರ ಪ್ರಭಾವದಿಂದ ಉದ್ದೀಪ್ತನಾಗಿ, ಮನೆಬಿಟ್ಟು ಬಂದು, ತಪಸ್ವಿಯಾಗಿ 'ರಮಣ ಮಹರ್ಷಿ'ಯಾಗಿ ಪರಿವರ್ತಿತವಾದುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಹೀಗೆ 'ಇಹ'ವೆನ್ನುವುದನ್ನು ಧಿಡೀರನೆ 'ಪರ'ದ ಕಡೆಗೆ ಹೊರಳಿಕೊಳ್ಳುವಂತೆ ಮಾಡುವ ಇಂಥ ಸಂದರ್ಭಗಳು ಜಗತ್ತಿನ ಇತಿಹಾಸದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಕವಿ ಅಡಿಗರು ಹೇಳುವಂತೆ– 'ಹೂವು, ಹಾಸಿಗೆ, ಚಂದ್ರ, ಚಂದನ, ಬಾಹುಬಂಧನ, ಚುಂಬನ' ಇತ್ಯಾದಿ ಇಂದ್ರಿಯಿಕ ಬಯಕೆಗಳ ಪರಿಧಿಯಲ್ಲೇ ಬದುಕನ್ನು ಕಳೆಯುತ್ತಿರುವ ಪ್ರಾಪಂಚಿಕನನ್ನು ಯಾವುದೋ 'ಮೋಹನ ಮುರಲಿ'ಯ ನಾದ ಇದ್ದಕ್ಕಿದ್ದಂತೆ ಸೆಳೆಯುತ್ತದೆ. ಪರಿಣಾಮವಾಗಿ ಆ ವ್ಯಕ್ತಿ ಇಷ್ಟು ದಿನವೂ ತನ್ನಿಂದ ಮರೆಯಾಗಿದ್ದ ಇನ್ನೊಂದು ವಲಯಕ್ಕೆ ಜಿಗಿಯುತ್ತಾನೆ. ಆತ್ಮ ಕೇಂದ್ರಿತ ವ್ಯಕ್ತಿತ್ವವೊಂದು ತನ್ನ ಮಿತಿಯನ್ನು ದಾಟಿ, ಎಲ್ಲ ಜೀವಿಗಳ ಹಿತವನ್ನೇ ಧ್ಯಾನಿಸುವಂಥ ವ್ಯಕ್ತಿಯಾಗಿ ರೂಪುಗೊಳ್ಳಬೇಕಾದರೆ ಪ್ರಾಯಃ ಈ ಬಗೆಯ 'ಆಧ್ಯಾತ್ಮಿಕ ಆಕಸ್ಮಿಕ' ಅನಿವಾರ್ಯವೇನೋ!

■ **ವೈನತೇಯ**

## ಮಾತೇ ಮುತ್ತು

★ ನೀವು ಜನರ ಮೌಲ್ಯಮಾಪನ ಮಾಡುತ್ತಾ ಕುಳಿತರೆ ಅವರನ್ನು ಪ್ರೀತಿಸಲು ನಿಮಗೆ ಸಮಯ ಸಿಗುವುದಿಲ್ಲ.

–ಮದರ್ ಥೆರೇಸಾ

★ ಬಾಳಿಗಂತೂ ಸಾವೆ ಕೊನೆಯೆ?
ಅದರಾಚೆಗೂ ನಿನ್ನ ಒಲವೆ?
ಒಲವು ತಾನೆ ತನಗೆ ಮೇರೆ?
ಒಲವಿಗಂತೂ ಮೇರೆ ಇರದು!

– ಕೆ.ಎಸ್. ನರಸಿಂಹಸ್ವಾಮಿ

★ ನಿಮಗೆ ವೈರಿಗಳಿದ್ದಾರೆಯೆ? ವೆರಿ ಗುಡ್. ಅದರರ್ಥ, ನೀವು ಜೀವನದಲ್ಲಿ ಯಾವಾಗಾದರೊಮ್ಮೆ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿ ಎದ್ದು ನಿಂತಿದ್ದೀರಿ!

–ವಿನ್‌ಸ್ಟನ್ ಚರ್ಚಿಲ್

★ ಕತ್ತಲಿನಿಂದ ಕತ್ತಲನ್ನು ಹೋಗಲಾಡಿಸಲು ಆಗದು, ಬೆಳಕಿನಿಂದ ಮಾತ್ರ ಸಾಧ್ಯ. ದ್ವೇಷದಿಂದ ದ್ವೇಷವನ್ನು ನಿವಾರಿಸಲು ಆಗದು, ಪ್ರೀತಿಯಿಂದ ಮಾತ್ರ ಸಾಧ್ಯ.

–ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ಸತ್ಯವು ನಿಮ್ಮನ್ನು ಬಿಡುಗಡೆಗೊಳಿಸುತ್ತದೆ; ನಿಮ್ಮ ಪ್ರಯತ್ನಗಳಲ್ಲ.

–ಜಿಡ್ಡು ಕೃಷ್ಣಮೂರ್ತಿ

★ ಕಾವ್ಯಧರ್ಮ ಸಂಕುಚಿತಗೊಂಡು ಕುಗ್ಗಿ ಹೋಗುತ್ತಿದೆ. ಕವಿಗಳು ಏಕಾಂತವಾಗಿ, ಅಂತರ್ಮುಖಿಯಾಗಿ ಬರೆಯುವುದರಲ್ಲಿ ತೊಡಗಬೇಕು.

–ಕೆ.ಎಸ್.ನಿಸಾರ್ ಅಹಮದ್

★ ದೇವ್ರ್ ಏನ್ರ ಕೊಡಲಣ್ಣ
ಕೊಡದಿದ್ರೆ ಬುಡಲಣ್ಣ
ನಾವೆಲ್ಲ ಓನೀಗೆ ಬಚ್ಚ!
ಓನ್ ಆಕಿದ್ ತಾಳ್ದಂಗೆ
ಕಣ್ ಮುಚ್ಕೊಂಡ್ ಯೇಳ್ದಂಗೆ
ಕುಣಿಯಾದೆ ರತ್ನನ್ ಪರ್ಪಂಚ!

–ಜಿ.ಪಿ.ರಾಜರತ್ನಂ

★ ಎಲ್ಲರನ್ನೂ ಯಾವುದೇ ಪಕ್ಷಪಾತವಿಲ್ಲದೆ ಸಮಾನತೆಯಿಂದ ನೋಡುವ ಗೆಳೆಯನೆಂದರೆ ಸಾವು ಮಾತ್ರ. ಅದರ ಕರುಣೆ, ಅದರ ಶಾಂತಿ ಮತ್ತು ಆಶ್ರಯಕ್ಕೆ ಧನಿಕ–ಬಡವನೆಂಬ ಬೇಧವಿಲ್ಲ.

–ಮಾರ್ಕ್ ಟ್ವೈನ್

★ ರಾವಣನ ಮಾತಿಗೆ ಮನಸೋತವ, ರಾಮನ ಮಾತಿಗೆ ಜಾಣನಾಗುವನೆ?

–ಕನ್ನಡ ಗಾದೆ

★ ನಾಯಕ ಎಂದರೆ ಭರವಸೆಗಳ ವ್ಯಾಪಾರಿ.

–ನೆಪೋಲಿಯನ್ ಬೊನಪಾರ್ಟ್

★ ವಿಧೇಯತೆಯನ್ನು ಕಲಿಯದವನು ಅತ್ಯುತ್ತಮ ಕಮಾಂಡರ್ ಆಗಲು ಸಾಧ್ಯವಿಲ್ಲ.

–ಅರಿಸ್ಟಾಟಲ್

★ ನೆಚ್ಚದಿರು ಸಿರಿಯನು ವೃಥಾ ಮದ
ಗಿಚ್ಚಿನುರಿಯಲಿ ಬೇಯದಿರು ಮಿಗೆ
ಬೆಚ್ಚಿ ಬೆದರದಿರೆರಡರಲಿ ಸತ್ವವನು ಚಲಿಸದಿರು..

–ಕುಮಾರವ್ಯಾಸ

★ ಸಂಭ್ರಮಾಚರಣೆ ಇದ್ದಾಗ ಬೆಂಬಲಿಗರನ್ನು ಮುಂದೆ ಬಿಟ್ಟು ನೀವು ಹಿಂದಿನಿಂದ ಮುನ್ನಡೆಸಿ. ಅಪಾಯ ಇದ್ದಾಗ ನೀವು ಮುಂದೆ ನಿಲ್ಲಿ. ನಾಯಕತ್ವ ಅಂದರೆ ಅದು.

–ನೆಲ್ಸನ್ ಮಂಡೇಲ

★ ಧರ್ಮದ ಸ್ಪರ್ಶವಿಲ್ಲದ ವಿಜ್ಞಾನ ಕುಂಟು; ವಿಜ್ಞಾನದ ಸ್ಪರ್ಶವಿಲ್ಲದ ಧರ್ಮ ಕುರುಡು.

–ಆಲ್ಬರ್ಟ್ ಐನ್‌ಸ್ಟೀನ್

★ ಕತ್ತಲೆಯೊಳೇನನೊ ಕಂಡು ಬೆದರಿದ ನಾಯಿ
ಎತ್ತಲೋ ಸಖನೋರ್ವನಿಹನೆಂದು ನಂಬಿ
ಕತ್ತೆತ್ತಿ ಮೋಳಿಡುತ ಬೊಗಳಿ ಹಾರಾಡುವುದು
ಭಕ್ತಿಯಂತೆಯೆ ನಮದು ಮಂಕುತಿಮ್ಮ

–ಡಿ.ವಿ.ಜಿ